# ಪ್ರೀತಿ ಉಳಿಸಿಕೊಳ್ಳುವ ಸವಾಲು ಮುಂದಿದೆ



**ಅಮೂಲ್ಯ ಭಾರದ್ವಾಜ್ ಕಲರ್ಸ್ ಕನ್ನಡ 'ಬೃಂದಾವನ'ದ ಪುಷ್ಪಾ**

**◆ ಅಭಿನಯದ ಜೀವನ ಆರಂಭ ಆಗಿದ್ದು ಹೇಗೆ?**

ಮೈಸೂರು ಮೂಲದ ನಾನು ಎಂಜಿನಿಯರಿಂಗ್ ಅಧ್ಯಯನ ಮಾಡಿದ್ದೇನೆ. ಐಟಿ ಕ್ಷೇತ್ರದಲ್ಲಿ ಕೆಲಸಕ್ಕೆ ಹೋಗುವ ಉತ್ಸಾಹ ನನಗಿತ್ತು. ಅಭಿನಯ ನನ್ನ ಆಸಕ್ತಿಯ ಕ್ಷೇತ್ರ ಆಗಿರಲಿಲ್ಲ. ನನ್ನ ಅಮ್ಮನಿಗೆ ನಾನು ಟೀವಿಯಲ್ಲಿ ನಟಿಸಬೇಕು ಎನ್ನುವ ಅಪೇಕ್ಷೆ ಇತ್ತು. ಅವರ ಆಸೆಯಂತೆ ಡಿಗ್ರಿ ಮುಗಿದ ನಂತರ ಕೆಲಸಕ್ಕೆ ಹೋಗದೆ ಆಡಿಷನ್ ನೀಡಲು ಆರಂಭಿಸಿದೆ. ಮೊದಲು ಕಲರ್ಸ್‌ನ 'ಶಾಂತಂ ಪಾಪಂ' ಮಾಡಿದೆ. ಅದಾದ ಮೇಲೆ 'ದಾಸ ಪುರಂದರ'. ಕಲರ್ಸ್ ಕನ್ನಡದಲ್ಲಿಯೇ ಅವಕಾಶ ನಿರಂತರವಾಗಿ ಸಿಗುತ್ತಿವೆ. ಅದಕ್ಕೆ ನನ್ನಲ್ಲಿ ಧನ್ಯತಾಭಾವ ಮೂಡಿದೆ. ನನ್ನ ತಾಯಿಯ ಆಸೆಯಂತೆ ಅಭಿನಯ ರಂಗದಲ್ಲಿ ಸಾಗುತ್ತಿದ್ದೇನೆ.

**◆ ಕೂಡು ಕುಟುಂಬದ ಸೊಸೆಯಾಗುತ್ತಿರುವುದು ಪುಷ್ಪಾಳಿಗೆ ಭೀತಿಯನ್ನು ಹುಟ್ಟಿಸಿರಬಹುದೆ?**

ಅಪ್ಪ–ಅಮ್ಮ ಇಲ್ಲದ ಪುಷ್ಪಾ ತನ್ನ ಅಣ್ಣ–ಅತ್ತಿಗೆ ಆಶ್ರಯದಲ್ಲಿ ಬೆಳೆದಿದ್ದಾಳೆ. ಆರಂಭದಿಂದಲೂ ಅವಳಿಗೆ ಭೇದಭಾವ ಮಾಡುವ ಮನೋಭಾವ ಇಲ್ಲ. ತನ್ನ ಸುತ್ತಲಿನ ಸಮಾಜದ ಜೊತೆ ಖುಷಿಯಿಂದ ಇರಬೇಕು ಎಂದು ಬಯಸುತ್ತಾಳೆ. ಅದರಲ್ಲೇ ಅವಳು ಸಂತೋಷವನ್ನೂ ಅನುಭವಿಸುತ್ತಾಳೆ. ತಾನು ತ್ಯಾಗ ಮಾಡಿ ಪ್ರೀತಿಯನ್ನು ಉಳಿಸುತ್ತಾಳೆ. ಈಗ ಕೂಡು ಕುಟುಂಬದ ದೊಡ್ಡಮನೆಯ ಸೊಸೆಯಾಗಿ ಹೊಸಿಲು ದಾಟಿದ್ದಾಳೆ. ಹೊಸ ವಾತಾವರಣ ಅವಳಿಗೆ ಭಯ ಹುಟ್ಟಿಸಿಲ್ಲ. ಅವರ ಜೊತೆ ಖುಷಿಯಿಂದ ನೆಲೆಸುವ ಧೈರ್ಯದಲ್ಲಿ ಇದ್ದಾಳೆ.

**◆ ನಿಮಗೆ ಎಂತಹ ಪಾತ್ರಗಳು ಇಷ್ಟ ಆಗುತ್ತವೆ?**

ಆಡಿಷನ್ ನೀಡಿದಾಗಲೆಲ್ಲ ಸೌಮ್ಯ ಸ್ವಭಾವದ ಪಾತ್ರಗಳೇ ನನಗೆ ಸೂಕ್ತ ಎಂಬ ಫೀಡ್‌ಬ್ಯಾಕ್ ಬಂದಿದೆ. ವಾಸ್ತವದಲ್ಲಿ ನನಗೆ ನೆಗೆಟಿವ್ ಪಾತ್ರವನ್ನು ನಿರ್ವಹಿಸಬೇಕು ಎನ್ನುವ ಆಸೆ ಇದೆ. ಸದ್ಯ ಕಲಿಯುವುದು ತುಂಬ ಇದೆ. ಇದೇ ಕಾರಣಕ್ಕೆ ಸಿನಿಮಾಕ್ಕೆ ಅವಕಾಶ ಬಂದರೂ ಸದ್ಯ ಒಪ್ಪುವ ಸ್ಥಿತಿಯಲ್ಲಿ ನಾನಿಲ್ಲ. ಯಾವುದೇ ಪಾತ್ರಕ್ಕಾದರೂ ನ್ಯಾಯವನ್ನು ಸಲ್ಲಿಸಬೇಕು. ನನ್ನಿಂದ ಆ ಪಾತ್ರವನ್ನು ನಿಭಾಯಿಸಲು ಸಾಧ್ಯ ಎನ್ನುವುದನ್ನು ನಿಖರವಾಗಿ ತಿಳಿದ ನಂತರವೇ ಒಪ್ಪುತ್ತೇನೆ. ಮುಂದೆ ಸಮಯ ಮತ್ತು ಸಂದರ್ಭ ಅದೆಲ್ಲವನ್ನೂ ನಿಭಾಯಿಸುತ್ತದೆ.

**◆ ಮನೆ ತುಂಬಿಸುವ ಸಂದರ್ಭದಲ್ಲಿ ಶಾಸ್ತ್ರ ನಿರಾಕರಣೆ ಮಾಡಿದಂತೆ ಆಯಿತಾ?**

ಆಕಾಶ್ ಮನೆಯಲ್ಲಿ ಸಂಪ್ರದಾಯವನ್ನು ಕಟ್ಟುನಿಟ್ಟಾಗಿ ಆಚರಿಸುತ್ತಾರೆ. ಆದ್ದರಿಂದ ಸಂಪ್ರದಾಯಬದ್ಧವಾಗಿಯೇ ಮದುವೆ ನಡೆಯಿತು. ಅವರು ವಿದೇಶದಲ್ಲಿ ಓದಿ ಬಂದಿದ್ದಾರೆ. ಅವರ ಖುಷಿಗೆ ತಕ್ಕಂತೆ ಆಧುನಿಕ ಟಚ್ ನೀಡಲಾಗಿತ್ತು. ಒಂದು ರೀತಿಯಲ್ಲಿ ಆಧುನಿಕವೂ ಅಲ್ಲದ ಪ್ರಾಚೀನ ಸಂಪ್ರದಾಯಬದ್ಧ ಅದ್ದೂರಿ ಮದುವೆ. ಆ ಮನೆಯವರು ಮುಕ್ತಮನಸ್ಸಿನವರು. ಯಾರೂ ರಿಜಿಡ್ ಇಲ್ಲ. ತಮ್ಮ ಮನೆತನದ ಸಂಪ್ರದಾಯದ ಜೊತೆ ಆಕಾಶ್ ಇಷ್ಟದಂತೆಯೇ ಮದುವೆ ಆಗಿದೆ.

ಬಹುತೇಕ ಸೀರಿಯಲ್‌ಗಳಲ್ಲಿ ಮನೆ ತುಂಬಿಸಿಕೊಳ್ಳುವಾಗ ಸೇರು ಒದ್ದು ಬರುವ ದೃಶ್ಯವನ್ನೇ ನೋಡಿದ್ದೇವೆ. ಈ ರೀತಿಯ ಪರಿಕಲ್ಪನೆ ಹೊಸದು. ಒದ್ದರೂ ಅಕ್ಕಿ ಮನೆ ತುಂಬ ಹರಡುತ್ತೆ. ಒದೆಯದೇ ಆ ಕೆಲಸವನ್ನು ಇಲ್ಲಿ ಮಾಡಲಾಗಿದೆ. ಅಂದರೆ ಆ ಆಚರಣೆಯ ಹಿಂದಿನ ಆಶಯವನ್ನೂ ಪೂರೈಸಲಾಗಿದೆ. ಪುಷ್ಪಾ ರೈತ ಕುಟುಂಬದ ಹಿನ್ನೆಲೆಯವಳು. ಹಾಗಾಗಿ ಆಕೆ ಅಕ್ಕಿಯನ್ನು ಒದೆಯುವುದಿಲ್ಲ. ಒಬ್ಬ ರೈತ ಭತ್ತದ ಕಾಳನ್ನು ಭೂಮಿಗೆ ಚೆಲ್ಲುವಾಗ ಭತ್ತದ ರಾಶಿಯನ್ನು ಬಯಸುತ್ತಾನೆ. ಅವಳು ಕೂಡ ಸುಖ ಸಂತೋಷ ರಾಶಿಯಾಗಲಿ ಎಂದು ಹಾಗೆ ಮಾಡುತ್ತಾಳೆ. ಆ ಸನ್ನಿವೇಶದ ಸೀನ್ ಪೇಪರ್ ನೋಡಿದಾಗ ವೈಯಕ್ತಿಕವಾಗಿ ನನಗೂ ವಾವ್ ಎಂದು ಅನಿಸಿತ್ತು.

**◆ ಮುಂದೆ ಆಕಾಶ್–ಪುಷ್ಪಾ ದಾಂಪತ್ಯಕ್ಕೆ ತೊಂದರೆ ಎದುರಾಗಬಹುದೇ?**

ಪುಷ್ಪಾಳಿಗೆ ಸದ್ಯ ಏನೋ ತಪ್ಪಾಗಿದೆ ಎನ್ನುವ ಅನುಮಾನ ಈಗ ಬಂದಿದೆ. ಏಕೆಂದರೆ ಆಕೆಯ ಗಂಡ ಮೊದಲಿನಂತೆ ತನ್ನ ಭಾವನೆಗಳನ್ನು ಹಂಚಿಕೊಳ್ಳುತ್ತಿಲ್ಲ. ಮದುವೆಗಿಂತ ಮುಂಚೆ ಎಲ್ಲ ಚೆನ್ನಾಗಿತ್ತು. ಈಗೇಕೆ ಹೀಗಾಗಿದೆ ಎನ್ನುವ ಗೊಂದಲ ಅವಳನ್ನು ಕಾಡುತ್ತಿದೆ. ತ್ಯಾಗದಲ್ಲೇ ಸುಖ ಕಾಣುವ ಪುಷ್ಪಾ ಇಲ್ಲೂ ತ್ಯಾಗದಿಂದ ಮೆರೆಯಬಹುದು. ಇಲ್ಲವೇ ತನ್ನ ಗಂಡನ ಪ್ರೀತಿ ಉಳಿಸಿಕೊಳ್ಳುವ ಸವಾಲು ಎದುರಿಸಬಹುದು. ವಾಸ್ತವದಲ್ಲಿ ಪುಷ್ಪಾಳನ್ನೇ ಆಕಾಶ್ ಪ್ರೀತಿ ಮಾಡಿದ್ದು, ಬೇರೆ ಹುಡುಗಿಯ ಫೋಟೊವನ್ನು ತೋರಿಸಿದ್ದರು. ಅದನ್ನು ಆತನಿಗೆ ಅರ್ಥಮಾಡಿಸುವ ಚಾಲೆಂಜ್ ಕೂಡ ಆಕೆಗಿದೆ.

■ **ರಾಘವೇಂದ್ರ ಕೆ.**